ವಿಶ್ವ ತಂಬಾಕು ರಹಿತ ದಿನದ

ಅಂಗವಾಗಿ ಬೃಹತ್ ಜನ ಜಾಗೃತ ಜಾಥಾ ಕಾರ್ಯಕ್ರಮ

ಹುಬ್ಬಳಿ : ಸ್ಥಳೀಯ ಕೆ.ಎಲ್.ಇ ಸಂಸ್ಥೆಯ ಶಿಕ್ಷಣ ಮಹಾವಿದ್ಯಾಲಯ ಹಾಗೂ ಸ್ನಾತಕೋತ್ತರ ಶಿಕ್ಷಣ ವಿಭಾಗ ವಿದ್ಯಾನಗರ ಹುಬ್ಬಳ್ಳಿಯಲ್ಲಿ ದಿನಾಂಕ 31.05.2022 ರಂದು ವಿಶ್ವ ತಂಬಾಕು ರಹಿತ ದಿನದ ಅಂಗವಾಗಿ ಬೃಹತ್ ಜನ ಜಾಗೃತ ಜಾಥಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಜಾಥಾ ಕಾರ್ಯಕ್ರಮವು ಸಂಜೆ 4.00 ಗಂಟೆಗೆ ಮಹಾವಿದ್ಯಾಲಯದಿಂದ ಹೊರಟು ಉಣಕಲ್ ಕ್ರಾಸ್ ವರಗೆ ಹೋಗಿ ಅಲ್ಲಿ ನೆರದಿದ್ದ ಜನರ ಮುಂದೆ ನಮ್ಮ ಮಹಾವಿದ್ಯಾಲಯದ ಪ್ರಥಮ ವರ್ಷದ ಪ್ರಶಿಕ್ಷಣಾರ್ಥಿಗಳಿಂದ ತಂಬಾಕು ಸೇವನೆಯಿಂದ ಆಗುವ ಅನಾಹುತಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ಬೀದಿ ನಾಟಕವನ್ನು ಪ್ರದರ್ಶಿಸಲಾಯಿತು. ಇದೇ ಸಂದರ್ಭದಲ್ಲಿ ಜಾಥಾದ ನೇತ್ರತ್ವವನ್ನು ವಹಿಸಿದ್ದ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ ಲಿಂಗರಾಜ ಸಿ ಮುಳ್ಳಳ್ಳಿ ಅವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತಾ ತಂಬಾಕು ಸೇವನೆಯನ್ನು ಬಹಿಷ್ಕರಿಸಿ ಆರೋಗ್ಯಕರ ಹಾಗೂ ತಂಬಾಕು ಮಾಲಿನ್ಯದಿಂದ ಭೂಮಿಯನ್ನು ಸಂರಕ್ಷಿಸಲು ಕರೆ ಕೊಟ್ಟರು. ತಂಬಾಕಿನ ದಷ್ಪರಿಣಾಮಗಳ ಕುರಿತು ಘೋಷವಾಕ್ಯಗಳನ್ನು ಘೋಷಿಸುತ್ತಾ ಹೇಳುತ್ತಾ ಜನ ಜಾಗೃತಿಯನ್ನು ಮೂಡಿಸುವಲ್ಲಿ ಯಶಸ್ವಿಯಾದರು. ಎಲ್ಲಾ ಬೋಧಕ ಮತ್ತು ಬೋಧಕೇತರ ಸಿಬ್ಬಂಧಿ ವರ್ಗದವರು ಹಾಗೂ ಪ್ರಥಮ ಮತ್ತು ದ್ವಿತೀಯ ವರ್ಷದ ಪ್ರಶಿಕ್ಷಣಾರ್ಥಿಗಳು ಹರ್ಷಉಲ್ಲಾಸದಿಂದ ತಮ್ಮ ಸಾಮಾಜಿಕ ಜವಬ್ದಾರಿಯಲ್ಲಿ ಭಾಗಿಯಾದರು.